**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಅಂಕೋಲಾ**

ಸಿ.ಸಿ.ನಂ.215/2022

**ಫಿರ್ಯಾದುದಾರರುಃ** ಶ್ರೀ ಸಚೀನ ಕೃಷ್ಣಾನಂದ ಹಬ್ಬು

ವಿರುದ್ಧ

**ಆರೋಪಿ** : ಶ್ರೀ ವಿಷ್ಣು ನಾಗಪ್ಪ ನಾಯ್ಕ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆಃ**

ಪ್ರ.1. ನೀವು ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ ಕೇಳಿಕೊಂಡಿರುತ್ತೇನೆ

ಪ್ರ.2. ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ನೀವು ವ್ಯವಹಾರವನ್ನು ಮಾಡುತ್ತೀರಿ ಹಾಗೂ ಬಹಳ ಹಿಂದಿನಿಂದ ಚಿರಪರಿಚಿತನಾಗಿರಾಗಿರುತ್ತೀರಿ ಹಾಗೂ ವ್ಯವಹಾರದ ಸಲುವಾಗಿ ಕೈಗಡವಾಗಿ ಸಾಲವನ್ನು ಪಡೆದು ವಾಗ್ದಾನ ಮಾಡಿದ ದಿನದಂದು ವಾಪಸ್ಸು ಮಾಡುತ್ತಿದ್ದದ್ದು ಇರುತ್ತದೆ, ಹಾಗೂ ನೀವು ದಿನಾಂಕ 15-08-2013 ರಂದು ರೂ.80,000/- ಹಣದ ಅಗತ್ಯತೆ ವವಹಾರಕ್ಕಾಗಿ ಇರುವುದಾಗಿ ಹೇಳಿ, ಅಷ್ಟು ಹಣ ನೀಡುವಂತೆ ಕೇಳಿ, 2 ತಿಂಗಳ ಅವಧಿಯ ಒಳಗೆ ಹಣ ಪಾವತಿಸುವುದಾಗಿ ಭರವಸೆಯನ್ನು ನೀಡಿದ್ದೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.3. ಫ್ರಾಸಾ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಿಮ್ಮ ಮೇಲೆ ಇದ್ದ ವಿಶ್ವಾಸದಿಂದ ಅವರು ಇಟ್ಟುಕೊಂಡಂತಹ ಹಣದಲ್ಲಿ ರೂ.60,000/-ನ್ನು ಆರೋಪಿಗೆ ಕೈಗಡ ಸಾಲವಾಗಿ ನೀಡಿರುತ್ತಾರೆ ಹಾಗೂ ನೀವು 2 ತಿಂಗಳು ಕಳೆದರೂ ಸಹ ಹಣ ಮರುಪಾವತಿ ಮಾಡದೆ ಇದ್ದಾಗ, ಅವರು ನಿಮ್ಮನ್ನು ಸಂಪರ್ಕಿಸಿ ವಿಚಾರಿಸಿದಾಗ ನೀವು ಅಂತೂ ಕೊನೆಯಲ್ಲಿ ದಿನಾಂಕ 22-10-2013 ರಂದು ಅವರಲ್ಲಿಗೆ ಬಂದು ನಿಮ್ಮ ಬಾಬ್ತು ಖಾತೆ ಇರುವ ವಿಜಯಾ ಬ್ಯಾಂಕ್, ಸುಂಕಸಾಳ ಶಾಖೆಯ, ಖಾತೆ ಸಂಖ್ಯೆ.12232379 ರ ರೂ.60,000/- ಕ್ಕೆ ಚೆಕ್ ಸಂಖ್ಯೆ. 232379 ಅನ್ನು ಅವರಿಗೆ ನೀಡಿದ್ದೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.4. ಫಿರ್ಯಾದಿ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ನಿಪಿ-1 ಚೆಕ್ಕನ್ನು ನಗದೀಕರಣಕ್ಕೆ ಕರ್ನಾಟಕ ಬ್ಯಾಂಕ್, ಬಬ್ರುವಾಡ ಶಾಖೆಯಲ್ಲಿ ಹಾಜರುಪಡಿಸಿದಾಗ ಆ ಚೆಕ್ಕು " ಸಾಕಷ್ಟು ಹಣ ಇಲ್ಲ" ಎಂದು ದಿನಾಂಕ 18-11-2013 ರಂದು ಎಂಬ ಬ್ಯಾಂಕ್ ಹಿಂಬರಹ ನಿಪಿ-2 ರೊಂದಿಗೆ ನಿಪಿ-1 ಚೆಕ್ಕು ವಾಪಾಸು ಬಂದಿರುತ್ತದೆ ಎಂದು ನುಡಿದರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.5. ಫಿರ್ಯಾದಿ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಿಮಗೆ ಸದ್ರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ವಕೀಲರ ಮೂಲಕ ದಿನಾಂಕ 28-11-2013 ರ ರಜಿಸ್ಟರ್ಡ್ ನೊಟೀಸ್ ನೀಡಿದ್ದು , ಸದರಿ ನೋಟಿಸ್ ದಿನಾಂಕ 06-12-2013 ರಂದು ಜಾರಿಯಾಗಿರುವ ಬಗ್ಗೆ ಅಂಚೆ ಇಲಾಖೆಯವರು ಪತ್ರದ ಮೇಲೆ ಮಾಡಿದ ಹಿಂಬರಹವನ್ನು ನಿಪಿ-4 ಅನ್ನು ಹಾಜರುಪಡಿಸಿದ್ದು, ನಂತರ ನೀವು ನಿಗದಿತ ಅವದಿಯೊಳಗೆ ಚೆಕ್‌ನ ಹಣವನ್ನು ಪಾವಸಿರುವುದಿಲ್ಲ ಹಾಗೂ ಉತ್ತರವನ್ನು ಕೂಡ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.6. ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?

ಉತ್ತರಃ ಇದೆ

ಪ್ರ.7. ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೇಯೇ ?

ಉತ್ತರಃ ಇಲ್ಲ.

(ಆರೋಪಿತರಿಗೆ ಮೇಲಿನ ಪ್ರಶ್ನೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ, ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ 22-02-2024 (ಮನೋಹರ ಎಂ.)

ಅಂಕೋಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಅಂಕೋಲಾ.